ಶ್ರೀ ಕಾಗೋಡು ತಿಮ್ಮಪ್ಪ: ಸರ್ಕಾರ ಏನೆಂಬುದು ಎಲ್ಲರಿಗೂ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಖರ್ಗೆಯವರು ವಿರೋಧ ಪಕ್ಷದಲ್ಲಿದ್ದಂಥ ಸಂದರ್ಭದಲ್ಲಿ ಏನೇನು ಪ್ರಸ್ತಾಪ ಮಾಡಿದ್ದಾರೆ ಎಂಬುದನ್ನು ಇದುವರೆಗೂ ಹೇಳುವುದಕ್ಕೆ ನಾವು ಹೋಗಿಲ್ಲ. ಆದರೂ ಇವರು ತಮ್ಮ ಮೇಲೆ ಒತ್ತಡ ತರುತ್ತಿದ್ದಾರೆ. ಈ ಸರ್ಕಾರ ದುರುದ್ದೇಶದಿಂದ ಇದನ್ನು ತಂದಿದೆ ಎಂದು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಇದೇ ಸದನದಲ್ಲಿ ಹಿಂದೆ ಸರ್ಕಾರ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿದಂಥ ಸಂದರ್ಭದಲ್ಲಿ ನಾವು ಸರ್ಕಾರಕ್ಕೆ ಸಹಕಾರ ಕೊಟ್ಟಿದ್ದೇವೆ ಮತ್ತು ನಾವು ಸಹ ಆಡಳಿತವನ್ನು ನಡೆಸಿದ್ದು, ಇದರ ಬಗ್ಗೆ ನಮಗೂ ಸಹ ಗೊತ್ತಿರುವ ದೃಷ್ಟಿಯಿಂದ ಮತ್ತು ವಿಕೇಂದ್ರೀಕರಣದಲ್ಲಿ ಸಂಪೂರ್ಣವಾಗಿ ನಂಬಿಕೆ ಇಟ್ಟುಕೊಂಡಿರತಕ್ಕಂಥ ನಾವು...

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಮೋಷನ್‌ನನ್ನು ಮೂವ್ ಮಾಡಬೇಕೇ ಇಲ್ಲವೇ ಎಂಬುದರ ಬಗ್ಗೆ ಮಾತನಾಡುವುದನ್ನು ಬಿಟ್ಟು ಬೇರೆ ಏನೋ ಹೇಳುವುದಕ್ಕೆ ಹೊರಟ್ಟಿದ್ದಾರೆ. ಆದ್ದರಿಂದ, ರೂಲ್ 81 ಏನು ಹೇಳುತ್ತದೆಂದು ತಾವು ಓದಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ತಾವು ಇದಕ್ಕೆ ಅಪ್ಪಣೆ ಕೊಡಬೇಡಿ. ಸರ್ಕಾರದ ಆಡಳಿತ ವ್ಯವಸ್ಥೆಯ ದುರುದ್ದೇಶ ಈ ವಿಧೇಯಕದಲ್ಲಿದೆ. ಇವರು ಒಳ್ಳೆಯ ಉದ್ದೇಶದಿಂದ ಇದನ್ನು ತಂದಿಲ್ಲ, ಆಡಳಿತ ಪಕ್ಷದ ಸದಸ್ಯರಿಗೆ ಅನುಕೂಲವಾಗುವ ದೃಷ್ಟಿಯಿಂದ ಇದನ್ನು ಮಾಡುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ಇದನ್ನು ವಿರೋಧಿಸಿ ನಾವು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಜೆ.ಡಿ.(ಯು) ಮತ್ತು ಜೆ.ಡಿ.(ಎಸ್) ಸದಸ್ಯರು ಧರಣಿ ಮಾಡಲು ಸದನದ ಬಾವಿಯೊಳಗೆ ಬಂದರು)

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ಬಿಲ್ ಮೂವ್ ಮಾಡುವುದಕ್ಕೆ ಅವಕಾಶ ಇಲ್ಲ. ಇದು ಪ್ರಜಾತಂತ್ರ ವ್ಯವಸ್ಥೆಗೆ ವಿರೋಧವಾದಂಥದ್ದು ಮತ್ತು ರಾಜಕೀಯವನ್ನು ಇಂಟರ್‌ವಿನ್ ಮಾಡುವುದಕ್ಕೆ ಅವಕಾಶ ಮಾಡಿಕೊಡುವಂತಹ ಒಂದು ಬಿಲ್ ಆಗಿದೆ. ಅದಕ್ಕಾಗಿ ಇದನ್ನು ನಾವು ವಿರೋಧ ಮಾಡುತ್ತೇವೆ ಮತ್ತು ಇದು ಮಂಡನೆ ಕೂಡ ಆಗಬಾರದು. ಆದ್ದರಿಂದ ಇದನ್ನು ವಿರೋಧ ಮಾಡಿ ಧರಣಿ ಮಾಡುತ್ತೇವೆ.